**ಸಾಕ್ಷಿಗೆ ದಿನಾಂಕಃ 06.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.RKG ರವರಿಂದಃ**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

3) **Intelli rose** ಸಂಸ್ಥೆಯವರು ಈ ಸಾಕ್ಷಿದಾರರಿಗೆ ನೀಡಿರುವ ಮೂಲ ಗುರುತಿನ ಚೀಟಿ ಮತ್ತು ಇದೇ ದಾಖಲೆಯ ನೆರಳಚ್ಚು **(photo copy)** ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ನೆರಳಚ್ಚು ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ

ನೆರಳಚ್ಚು ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ನೆರಳಚ್ಚು ಪ್ರತಿಯನ್ನು ನಿ.ಪಿ.**28** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

4) **Intellirose** ಸಂಸ್ಥೆಯಿಂದ ನವೀನ್ ಕುಮಾರ್ ರವರಿಗೆ ಉದ್ಯೋಗ ಕೊಡುವುದಾಗಿ ನೀಡಿರುವಂತಹ ಒಂದು ಪತ್ರವನ್ನು ನಿ.ಪಿ.**29** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.**29** ದಾಖಲೆಯು ಒಟ್ಟು **7** ಹಾಳೆಗಳನ್ನು ಒಳಗೊಂಡಿದೆ.

5) ಮೂರು ಸಂಬಳದ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.**30** ರಿಂದ ನಿ.ಪಿ.**32** ಎಂದು ಗುರುತಿಸಿದೆ.

**ಪಾಟೀ ಸವಾಲು: ಎದುರುದಾರರ ಪರ ಶ್ರೀ.ಎಂ.ಎಸ್.ಜಿ. ವಕೀಲರಿಂದಃ**

1) ನಿ.ಪಿ.**29** ಎಂದು ಗುರುತು ಆಗಿರುವ ದಾಖಲೆಯು ನಮ್ಮ ಸಂಸ್ಥೆಯ **Human Resource Manager** ರವರ ಉಸ್ತುವಾರಿ **(custody)** ಯಲ್ಲಿ ಇರುತ್ತದೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಮತ್ತು ಸಾಕ್ಷಿ ನುಡಿಯಬೇಕು ಎಂದು ಹೇಳಿ ನನಗೆ ಅನುಮತಿ ಪತ್ರವನ್ನು ನಮ್ಮ ಸಂಸ್ಥೆಯವರು ನನಗೆ ನೀಡಿರುವುದಿಲ್ಲ. ಅನುಮತಿ ಪತ್ರ ಇಲ್ಲದೇ ನಾನು ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು.

2) ನಿ.ಪಿ.**29** ಎಂದು ಗುರುತು ಆಗಿರುವ ದಾಖಲೆಗಳಲ್ಲಿ ನವೀನ್ ಕುಮಾರ್ ರವರ ಸಹಿಗಳು ಇರುವುದಿಲ್ಲ. ನಿ.ಪಿ.**29** ರಲ್ಲಿ ನಮ್ಮ ಸಂಸ್ಥೆಯ ಮಾನವ ಸಂಪನ್ಮೂಲ ವ್ಯವಸ್ಥಾಪಕರ ಸಹಿ ಇದೆ. ನಮ್ಮ **Intellirose** ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಎಲ್ಲರಿಗೂ ಆರೋಗ್ಯ ವಿಮೆಯನ್ನು ಕೊಡುತ್ತೇವೆ. ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಅನಾರೋಗ್ಯಕ್ಕೆ ತುತ್ತಾದರೆ ಮತ್ತು ಅಪಘಾತಕ್ಕಿಡಾದರೆ ಅವರುಗಳಿಗೆ ವೈದ್ಯಕೀಯ ವೆಚ್ಚದ ಮರುಪಾವತಿ **(reimbursement)** ಸೌಲಭ್ಯ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಕೇವಲ **3** ಲಕ್ಷ ರೂಪಾಯಿಯ ವರೆಗೆ ನಾವು ನಮ್ಮ ಸಂಸ್ಥೆಯಿಂದ **reimbursement** ಕೊಡುತ್ತೇವೆ" ಎಂದು ನುಡಿದಿದ್ದಾರೆ.

3) ಮೆಡಿಕ್ಲೇಮ್ ಅಥವಾ ಆರೋಗ್ಯ ವಿಮೆಗೆ ಸಂಬಂಧಿಸಿದಂತಹ ವಿವರಗಳನ್ನು ಆಫರಿಂಗ್ ಲೆಟರ್ ನಲ್ಲಿ ನಮೂದು ಮಾಡಲಾಗುತ್ತದೆ. ನಿ.ಪಿ.**29** ರಲ್ಲಿ **reimbursement** ಗೆ ಸಂಬಂಧಪಟ್ಟ ಹಾಗೆ **upper limit** ನಮೂದು ಮಾಡಿರುವುದಿಲ್ಲ ಎಂದರೆ ಸರಿ.

4) ಮೇಲೆ ಹೇಳಿದ ನವೀನ್ ಕುಮಾರ್ ರವರು ಮೆಡಿಕಲ್ **reimbursement** ಗಾಗಿ ನಮ್ಮ ಸಂಸ್ಥೆಗೆ ಅರ್ಜಿಯನ್ನು

ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ.

5) ನವೀನ್ ಕುಮಾರ್ ರವರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಆ ಕಾರಣದಿಂದಲೇ ಆತನಿಗೆ ಮೆಡಿಕಲ್ **reimbursement** ಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

6) ಕೇವಲ ಅರ್ಜಿದಾರರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಮ್ಮ **Intellirose** ಸಂಸ್ಥೆಯವರು ನಿ.ಪಿ.**29** ರಿಂದ ನಿ.ಪಿ.**32** ದಾಖಲೆಗಳನ್ನು ಸೃಷ್ಟಿ ಮಾಡಿ ಕೊಟ್ಟಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.